**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 991/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 08**

**ದಿನಾಂಕಃ** 11.08.2026 **ಸಿಡಬ್ಲ್ಯೂ** 15

| | |
|---|---|
| ಹೆಸರು | ಮಹೇಶ |
| ತಂದೆಯ ಹೆಸರು | ಕೆಂಚಪ್ಪ |
| ವಯಸ್ಸು | 30 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಬೆಳ್ಳೂಡಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 2 ವರೆ ವರ್ಷಗಳ ಹಿಂದೆ ನಾನು ಹೊನ್ನಾಳಿಗೆ ಕೆ ಎಸ್ ಆರ್ ಟಿ ಬಸನಲ್ಲಿ ಹೋಗುತ್ತಿದ್ದಾಗ ಮಧ್ಯಾಹ್ನ 2.30 ಗಂಟೆಗೆ ಬೆಳ್ಳೂಡಿ ಕ್ರಾಸ್ ಹತ್ತಿರ ಬಸ್ ನಿಂತಿದ್ದು ಗಲಾಟೆಯಾಗುತ್ತಿತ್ತು. ನಾನು ಕೆಳಗಡೆ ಇಳಿದಾಗ ಯಾರು ಯಾರಿಗೆ ಹೊಡೆದಿರುತ್ತಾರೆ ಏಕೆ ಹೊಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನಾನು ದಿಃ 20.01.2024 ರಂದು ಮಧ್ಯಾಹ್ನ 2.30 ಗಂಟೆಗೆ ಹರಿಹರ ಶಿವಮೊಗ್ಗ ರಸ್ತೆ ಶಿವಪ್ಪ ಬಡಾವಣೆ ಕ್ರಾಸನಲ್ಲಿರುವ ರಾಕೇಶ ರವರ ವೆಲ್ಡಿಂಗ್ ಶಾಪ ಬಳಿ ನಿಂತಿರುವಾಗ ಹರಿಹರ ಕಡೆಯಿಂದ ಹೊನ್ನಾಳಿಗೆ ಹೋಗಲು ಕೆಎ 17 ಎಫ್ 1918 ನೇ ಕೆ ಎಸ್ ಆರ್ ಟಿ ಸಿ ಬಸ ಬಂದು ನಿಂತಿತು. ನಮ್ಮ ಗ್ರಾಮದ ಸುರೇಶ ಕೆಎ 17 ಇಕೆ /5370 ನೇ ಬೈಕ್ ಚಾಲಕ ಬಸ್ ಗೆ ಸೈಡ ಕೊಡದೇ ಬೈಪಾಸನಿಂದ ಬೆಳ್ಳೂಡಿ ಗ್ರಾಮದವರೆಗೆ ಹಾರನ್ ಹಾಕಿದರೂ ಸಹ ಬಸ್ ಗೆ ಸೈಡ ಕೊಡಲಿಲ್ಲ. ಬೈಕ ಚಾಲಕ ಬೆಳ್ಳೂಡಿ ಗ್ರಾಮದ ಹತ್ತಿರ ಹರಿಹರ ಶಿವಮೊಗ್ಗ ರಸ್ತೆಯಲ್ಲಿ ಮಧ್ಯಾಹ್ನ 2.30 ಗಂಟೆಗೆ ಬಸ್ ಗೆ ಬೈಕನ್ನು ಅಡ್ಡ ಹಾಕಿ ಏಕಾಏಕಿ ಬಸನ್ನು ನಿಲ್ಲಿಸಿ ಡ್ರೈವರ ಸೀಟಿನ ಬಲಬಾಗದ ಸೈಡನಿಂದ ಸುರೇಶ ಮತ್ತು ಸಿದ್ದೇಶ ಹತ್ತಿ ಚಾಲಕನಿಗೆ ಸೂಳೆಮಗನೇ, ಮಿಂಡ್ರಿಮಗನೇ ಹಾರನ್ ಹಾಕುತ್ತೀಯಾ ಎಂದು ಅವಾಚ್ಯವಾಗಿ ಬೈದಾಡಿ ಚಾಲಕನ ಕೊರಳ ಪಟ್ಟಿ ಹಿಡಿದು ಬಸ್ ನಿಂದ ಕೆಳಗೆ ಇಳಿದು ಬಸ್ ಚಾಲಕ ಮುಖಕ್ಕೆ ಹೊಡೆದನು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಕಂಡಕ್ಟರ್ ಗೂ ಸಹ ಬೈದು ಹಲ್ಲೆ ಮಾಡಿರುತ್ತಾನೆ ಅಲ್ಲದೇ ಬಸ್ ಚಾಲಕ ಧರಿಸಿದ್ದ ಸಮವಸ್ತ್ರವನ್ನು ಸುರೇಶನು ಹರಿದು ಹಾಕಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ಚಲಾಕ ಮತ್ತು ಕಂಡಕ್ಟರ್ ಹೆಸರು ತಿಳಿಯಲಾಗಿ ಬಸವರಾಜಪ್ಪ ಹಾಗೂ ಪ್ರಭಯ್ಯ

ಮಠಪತಿ ಎಂದು ತಿಳಿಯಿತು. ನಂತರ ಸಾರ್ವಜನಿಕರಿಗೆ ಚಾಲಕ ಕಂಡಕ್ಟರ್ ವಿಚಾರಿಸಿದಾಗ ಹೊಡೆದ ವ್ಯಕ್ತಿ ಹೆಸರು ಸುರೇಶ ಎಂದು ತಿಳಿಸಿದರು. ನಂತರ ಚಾಲಕ ನಿರ್ವಾಹಕರು ಹರಿಹರ ಆಸ್ಪತ್ರೆಗೆ ಹೋದರು ಎಂದರೆ ಸರಿಯಲ್ಲ. ನಂತರ ಚಾಸಾ.1 ರವರು ದೂರು ನೀಡಿದ್ದು ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ.12 ಎಂದು ಗುರುತಿಸಲಾಯಿತು. ನಿಪಿ.12 ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.